**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).**
**ಎಸ್.ಸಿ. ನಂ. 5019/2019**

**ಪ್ರಾಸಾ -- 4**

**ಚಾಸಾ -- 4**

ಸಾಕ್ಷಿಯ ಹೆಸರು – ಶಾನಿ

ತಂದೆಯ ಹೆಸರು – ಫಿಲಿಪ್

ವಯಸ್ಸು – 43 ವರ್ಷ

ವೃತ್ತಿ – ಡ್ರೈವರ್

ವಿಳಾಸ – ವಿರಾಜಪೇಟೆ

ದಿಃ 19.08.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನನಗೆ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯ ಪರಿಚಯ ಇಲ್ಲ ಹಾಗೂ 1 ನೇ ಆರೋಪಿಯ ಪರಿಚಯ ಇಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ನಾನು ನನ್ನ ವೈಯಕ್ತಿಕ ಕೆಲಸದ ಮೇರೆಗೆ ಠಾಣೆಗೆ ಹೋದಾಗ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲೆಯಲ್ಲಿ ಸಹಿ ಮಾಡಿದ್ದೆ. ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ ದಾಖಲೆ ಮಹಜರು ಆಗಿದ್ದು, ಸದರಿ ಮಹಜರನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2(ಡಿ) ಎಂದು ಗುರುತಿಸಲಾಯಿತು. ನಿಪಿ 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನಗೆ ನಿಪಿ 2 ನ್ನು ಓದಿ ಹೇಳಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಿಪಿ 2 ರಲ್ಲಿ ಸಹಿ ಮಾಡಿದ್ದೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಮಾಡಿರಲಿಲ್ಲ. ಈಗ ತೋರಿಸಿದ ಛಾಯಾಚಿತ್ರದಲ್ಲಿ ನಾನು ಕಾಣಿಸುತ್ತಿದ್ದೇನೆ. ಸದರಿ ಛಾಯಾಚಿತ್ರಗಳನ್ನು ಈಗಾಗಲೇ ನಿಪಿ 3 ರಿಂದ 7 ಎಂದು ಗುರುತಿಸಲಾಗಿದೆ. ನಿಪಿ 3 ರಿಂದ 7 ರಲ್ಲಿ ಪೊಲೀಸರು ಹಾಗೂ ಬೇರೆ ವ್ಯಕ್ತಿಗಳು ಕಾಣಿಸುತ್ತಿದ್ದಾರೆ, ಆ ಬೇರೆ ವ್ಯಕ್ತಿಗಳ ಪರಿಚಯ ನನಗೆ ಇಲ್ಲ. ನಿಪಿ 3 ರಿಂದ 7 ನ್ನು ಪೊಲೀಸರು ತೆಗೆದಿರುತ್ತಾರೆ. ಎಲ್ಲಿ ಎಂದು ನನಗೆ ಗೊತ್ತಿಲ್ಲ. ನಾನು ಈ ಬಗ್ಗೆ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ**

**ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

2. ದಿಃ 21.07.2019 ರಂದು ಮಃ 12.45 ಗಂಟೆಗೆ ವಿರಾಜಪೇಟೆ ಪೊ, ಠಾಣೆ ಪೊಲೀಸ್ ಸಿಬ್ಬಂದಿ ಗಿರೀಶ್ ರವರು ಸಿಪಿಐ ರವರ ಕಛೇರಿಗೆ ಬರುವಂತೆ ಹೇಳಿದ್ದು ನಾನು ಅದರಂತೆ ಸಿಪಿಐ ರವರ ಕಛೇರಿಗೆ ಹೋಗಿದ್ದೆ ಎಂದರೆ ಸರಿಯಲ್ಲ. ಸಿಪಿಐ ರವರ ಕಛೇರಿಯಲ್ಲಿ ಪೊಲೀಸರು ನನಗೆ ಪ್ರಕಾಶ್ ಎನ್ನುವವರ ಮನೆಯಲ್ಲಿ ಬಾಡಿಗೆಗೆ ವಾಸವಾಗಿರುವ 1 ನೇ ಆರೋಪಿಯ ಮನೆಯಲ್ಲಿ ವೇಶ್ಯಾವಾಟಿಕೆ ನಡೆಯುತ್ತಿರುವುದಾಗಿ ದಾಳಿ ಮಾಡುವ ಸಮಯದಲ್ಲಿ ಪಂಚರಾಗುವಂತೆ ಕೋರಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ 3 ರವರು ಪಂಚರಾಗಲು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ನಾನು ಚಾಸಾ 3 ಮತ್ತು 5 ಹಾಗೂ ಪೊಲೀಸರು ಇಲಾಖಾ ವಾಹನದಲ್ಲಿ ಮಃ 1.30 ಗಂಟೆಗೆ ಮುಂಡ್ಯಾಳುಂಡ ಪ್ರಕಾಶ್ ರವರ ಮನೆಗೆ ಹೋಗಿ ಅವರ ಮನೆಯಲ್ಲಿ 1 ನೇ ಆರೋಪಿ ವೇಶ್ಯಾವಾಟಿಕೆ ನಡೆಸುತ್ತಿರುವುದಾಗಿ ಮಾಹಿತಿ ನೀಡಿ ಶೋಧನೆ ಮಾಡುವ ಸಮಯದಲ್ಲಿ ಹಾಜರಿರುವಂತೆ ಪ್ರಕಾಶ್ ರವರಿಗೆ ಶೋಧನಾವಾರಂಟ್ ಜಾರಿ ಗೊಳಿಸಿ ಅವರು 1 ನೇ ಆರೋಪಿ ಬಾಡಿಗೆಗೆ ವಾಸವಿರುವ ಮನೆಯನ್ನು ಪೊಲೀಸರು ತೋರಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರು ಬಾಗಿಲು ತಟ್ಟಿದಾಗ ಒಳಗಿದ್ದ ಒಬ್ಬ ಯುವತಿ ಬಾಗಿಲುತೆಗೆದು ಪೊಲೀಸರು ಆಕೆಯ ಹೆಸರು ವಿಳಾಸ ಕೇಳಿದಾಗ ಆಕೆ ತನ್ನ ಹೆಸರು ಹೆಚ್ ಸಿ ಜಯಂತಿ, ತಂದೆ ಸತೀಶ್, 21 ವರ್ಷ, ಕೆರೆಗೋಡು ವಾಸ ಎಂದು ತಿಳಿಸಿದ್ದು , ಹಾಲಿ ಚಂದ್ರಾವತಿಯವರ ಮನೆ ಬಸವನಗುಡ ಮೇಟಗಳ್ಳಿಯ ಬಳಿ ಮೈಸೂರು ನಗರ ಎಂದುತಿಳಿಸಿದ್ದು ತನಗೆ 1 ನೇ ಆರೋಪಿ ಕೊಡಬೇಕಿದ್ದ ಹಣ ಪಡೆಯಲು ಬಂದಿದ್ದಾಗಿ ತಿಳಿಸಿರುತ್ತಾರೆ ಎಂದರ ಸರಿಯಲ್ಲ. ಚಾಸಾ 2 ತಾನು ಈ ದಿನ ಬೆಳಿಗ್ಗೆ 1 ನೇ ಆರೋಪಿಯ ಮನೆಗೆ ಬಂದಾಗ 1 ನೇ ಆರೋಪಿ

ಹಾಗೂ ಆತನ ಪತ್ನಿ 2 ನೇ ಆರೋಪಿ ಸೇರಿಕೊಂಡು ಮಲೆಯಾಳದಲ್ಲಿ ಮಾತನಾಡುತ್ತಿದ್ದ ಒಬ್ಬ ಅಪರಿಚಿತ ವ್ಯಕ್ತಿಯೊಂದಿಗೆ ದೈಹಿಕ ಸಂಪರ್ಕ ನಡೆಸಿದರೆ ಹೆಚ್ಚು ಹಣ ಕೊಡುವುದಾಗಿ ಹೇಳಿದ್ದರಿಂದ ತಾನು ಹಣದ ಆಸೆಗೆ ಒಪ್ಪಿ ಆರೋಪಿಗಳ ಮಲಗುವ ಕೋಣೆಯ ನೆಲದಲ್ಲಿ ಹಾಸಿಗೆಯನ್ನು ಹಾಸಿ ಅಪರಿಚಿತ ವ್ಯಕ್ತಿಯೊಂದಿಗೆ ದೈಹಿಕ ಸಂಪರ್ಕ ನಡೆಸುವಂತೆ ನನಗೆ ಹೇಳಿದ್ದರಿಂದ ನಾನು ಅಪರಿಚಿತ ಗಂಡಸಿನೊಂದಿಗೆ ದೈಹಿಕ ಸಂಪರ್ಕ ನಡೆಸಿದ್ದಾಗಿ ಹಾಗೂ ತನ್ನೊಂದಿಗೆ ದೈಹಿಕ ಸಂಪರ್ಕ ನಡೆಸಿದ ವ್ಯಕ್ತಿ ಈಗ ತಾನೇ ಮನೆಯಿಂದ ಹೋಗಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಆಸ್ಪತ್ರೆಗೆ ಎಂದು ಹೋಗಿದ್ದು 1 ನೇ ಆರೋಪಿ ಪೊಲೀಸ್ ಜೀಪನ್ನು ನೋಡಿ ಹಿಂಬಾಗಿಲಿನಿಂದ ಓಡಿ ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 2 ರವರು ತಾನು ಅಪರಿಚಿತ ವ್ಯಕ್ತಿಯೊಂದಿಗೆ ದೈಹಿಕ ಸಂಪರ್ಕ ನಡೆಸಿದ ಸ್ಥಳವನ್ನು ನಮ್ಮ ಸಮಕ್ಷಮ ಪೊಲೀಸರಿಗೆ ತೋರಿಸಿದ್ದು ಪೊಲೀಸರು ಸದರಿ ಸ್ಥಳವನ್ನು ಪರಿಶೀಲನೆ ಮಾಡಿ ನಿಪಿ 2 ರಂತೆ ಮಹಜರನ್ನು ಮಃ 1.30 ರಿಂದ 3.30 ರವರೆಗೆ ಬರವಣಿಗೆ ಮಾಡಿ ಓಡಿ ಹೇಳಿ ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ ನಿಪಿ 2 ಮಹಜರು ಮಾಡುವ ಕಾಲಕ್ಕೆ ಹಾಸಿಗೆಯಲ್ಲಿ ಬಿದ್ದಿದ್ದ ಉಪಯೋಗಿಸಿದ ಒಂದು ಕಾಂಡೋಮ್, ಪಕ್ಕದಲ್ಲಿದ್ದ KOHINOR ಎಂದು ಬರೆದಿರುವ ಪ್ಯಾಕೆಟ್ ನಲ್ಲಿ ಉಪಯೋಗಿಸದೇ ಇರುವ ಒಂದು ಕಾಂಡೋಮ್ ಅನ್ನು ಪ್ಯಾಕೇಟ್ ಸಮೇತ ವಶಪಡಿಸಿಕೊಂಡು ಒಂದು ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ.ನಿಪಿ 2 ಮಹಜರು ಮಾಡುವ ಸಮಯದಲ್ಲಿ ನಿಪಿ 3 ರಿಂದ 7 ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ 21.07.2019 ರಂದು ನನಗೆ ಈಗ ಓದಿ ಹೇಳಿದಂತೆ " ನಾನು ——— ಗುರುತಿಸುತ್ತೇನೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ನಿಪಿ 20 ಎಂದು ಗುರುತಿಸಲಾಯಿತು. ನಿಪಿ 2 ಹಾಗೂ 20 ರಲ್ಲಿರುವ ಎಲ್ಲ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)